ಬೆಂಗಳೂರು ಡಿಸ್ಟ್ರಿಕ್ಟ್.

ತಾರೀಖು 1ನೇ ಜುಲೈ 1884.

ಬೆಂಗಳೂರಲ್ಲಿರತಕ್ಕ ಮೈಸೂರು ಗವರ್ನಮೆಂಟ್ ಸೇವಿಂಗಸ್ ಬ್ಯಾಂಕಿನ ಡಿಪಾಜಿಟ್‌ದಾರ್ರಿಗೆ ಕೇಳಿ, ಕೊಳ್ಳುವದೇನಂದರೆ, 1884ನೇ ಇಸವಿ ಮಾರ್ಚಿ 31ನೇ ಮರ್ತುಂ ವರಿಗಿನ ಬಡ್ಡಿಯನ್ನ ಫೈಸಲ್ಮಾಡುವ ಬಗ್ಯಾಗಿ ಅವರವರ ಪ್ಯಾಸ್ ಬುಕ್ಕುಗಳನ್ನು ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರೀಯಲ್ಲಿ ಹಾಜರ್ಮಾಡತಕ್ಕದ್ದು.

ಎ. ರಂಗಸ್ವಾಮಯ್ಯಂಗಾರ್,
ಛಾರ್ ಟ್ರೆಜರಿ ಆಫೀಸರ್.

ಬೆಂಗಳೂರು ಸಬ್ ಜಡ್ಜ್‌ರೀಯವರ ಕೋರ್ಟ್‌ನಲ್ಲಿ—

1884ನೇ ಇಸವಿ ಅರ್ಜೀ ನಂಬರು 116.

ಬೆಂಗಳೂರು ರಾಮಂಣನ ಪೇಟೆಲಿರುವ ಮರುಳು ಸಿದ್ದಯ್ಯ ಬೆಂಗಳೂರು ಸ್ಥಳದ ದೊಡ್ಡ ಹೊನ್ನಯ್ಯ ವೆರಫ್ ರುದ್ರಯ್ಯ

ಅರ್ಜೀದಾರ ಯಿದರಿ ಮೈನರಾದ ಬೆಂಗಳೂರು ರಾಮಂಣನ ಪೇಟೆ ಸ್ಥಳದ ಅಕ್ಕಿ ಹೊನ್ನಮ್ಮನ ಆಸ್ತಿ ವಿಷಯದಲ್ಲಿ—

ಸದರೀ ಮೈನರಾದ ಅಕ್ಕಿ ಹೊನ್ನಮ್ಮನಿಗೆ ಮಾವನಾಗಬೇಕೆಂಬ ಹಕ್ಕಿನ ಮೇಲೆ ಬೆಂಗಳೂರು ಸ್ಥಳದ ಮರುಳು ಸಿದ್ದಯ್ಯನು, ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾನೆ.

ಸದರೀ ಅರ್ಜೀ ಹಿಯರಿಂಗ್ ಬಗ್ಯೆ 1884ನೇ ಇಸವಿ ಆಗಸ್ಟು ತಾರೀಖು 21ರಲ್ಲು ವೊಕರರು ಮಾಡಿರುವದಾಗಿ ಇದರಿಂದ ನೋಟೀಸು ಕೊಡಲಾಗಿದೆ.

1884ನೇ ಇಸವಿ ಅರ್ಜೀ ನಂಬರ್ 122.

ಮೃತಪಟ್ಟ ಅಂಗಡೀ ನಂಜಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರು ತಾಲ್ಲೂಕು ಯಶವಂತಪುರದ ಹೋಬಳಿ ಬಜೆಗೌಡನ ಕೊಡಗೇಹಳ್ಳಿ ಮುನಿಶಾಮಪ್ಪ, ಮೃತಪಟ್ಟ ಸದರೀ ಅಂಗಡೀ ನಂಜಪ್ಪನವರಿಗೆ ಅಳಿಯನಾಗಬೇಕೆಂಬ ಹಕ್ಕುದಾರೀ ಮೇಲೆ ಕೊಡಗೇಹಳ್ಳಿ ಸ್ಥಳದ ಮುನಿಶಾಮಪ್ಪನವರು ಕೊಡಗೇಹಳ್ಳಿ ವೆಂಸಸ್ಥರಾಗಿ ಮೃತಪಟ್ಟ ಸದರೀ ನಂಜಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಐಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮುನಿಶಾಮಪ್ಪನವರ ಅರ್ಜಿಯನ್ನು 1884ನೇ ಇಸವಿ ಆಗಸ್ಟು ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿವರ್ಕೆ ಮಾಡಲ್ಪಡುತ್ತೆ... ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

ದಾ॥ 1884ನೇ ಇಸವಿ ಜುಲೈ ತಿಂಗಳು 28ನೇ ತಾರೀಖಿನಲ್ಲಿ ಕೋರ್ಟು ವೊಹರ್‌ನಿಂ ಮತ್ತು ನನ್ಮುದಸ್ತಖತ್ತೊಡನೆ ಕೊಡೋಣಾಗಿದೆ.

ದಿವಾಳಿಯಾದ ಡಿಕ್ರೀದೇಣೀದಾರ ಚಿಕ್ಕಬಳ್ಳಾಪುರ ತಾ॥ ದಾಸರಹಳ್ಳಿಯಲ್ಲಿ ಇರುವ ವಡ್ಡರ ಗುರುವನ ಮಗ ಮುನಿಗನ ವಿಷಯದಲ್ಲಿ.

ಸ್ರ 1884ನೇ ಇಸವಿ ದಿವಾಳಿ ಕೇಸ್ ನಂಬರ್ 22ರಲ್ಲಿ.

ಹುಕ್ಕುಂ.

ವೆಂಕಟ್ಟಂಡ ವಡ್ಡರ ಗುರುವನ ಮಗ ಮುನಿಗನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜ್‌ರಾದ ಸಿ. ಕೈಸ್ ಸಾಹೆಬರವರ ರೂಬರೂ ಅರ್ಜೀದಾರನಾದ ವಡ್ಡರ ಗುರುವನ ಮಗ ಮುನಿಗನ ದರ್ಯಾಫ್ತೀ ಮಾಡಲ್ಪಟ್ಟಿತು.